# ಹರಿಸ್ಮರಣೆ ಮಾಡೋ ನಿರಂತರ

1. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao
2. **Ref.:** Dasara Padagalu – Purandara Dasara Keerthane, Vol 5, Edited by Shri Pavanje Gururao, Sriman Madhwa Siddantha Granthalaya, Udupi
3. **Note:** The wordings mentioned without highlights are as per Ref. 2. The wordings as per Ref.1 are almost similar to Ref. 2 except few wordings which are marked in yellow highlights.
4. **Note:** Singer has followed the lyrics as in Ref. 1.

ರಾಗ: ಯಮುನಾ ಕಲ್ಯಾಣಿ ತಾಳ: ಏಕ

ಹರಿಸ್ಮರಣೆ ಮಾಡೋ ನಿರಂತರ || ಪ ||
ಪರಗತಿಗೆ ಇದು (ನಿಧಾನ) ನಿರ್ಧಾರ || ಅಪ ||

ದುರಿತ ಗಜಕ್ಕೆ ಕಂಠೀರವನೆನಿಸಿದ
ಶರಣಾಗತ ರಕ್ಷಕ ಪಾವನ ನೀ || 1 ||

ಸ್ಮರಣೆಗೈದ ಪ್ರಹ್ಲಾದನ ರಕ್ಷಿಸಿದ
ದುರುಳ ಹಿರಣ್ಯಕನುದರವ ಸೀಳಿದ || 2 ||

ತರುಣಿ ದ್ರೌಪದಿ ಮೊರೆಯಿಡಲಾಕ್ಷಣ
ಭರದಿಂದಕ್ಷಯವಿತ್ತ ಮಹಾತ್ಮನ || 3 ||

ಅಂದು ಅಜಾಮಿಳ ಕಂದನ ಕರೆಯಲು
ಬಂದು ಸಲಹಿ ಆನಂದವ ತೋರಿದ || 4 ||

ಶ್ರೀಶ ಪುರಂದರ ವಿಠಲರಾಯನ
ಸೃಷ್ಟಿಗೊಡೆಯನ ಮುಟ್ಟಿ ಭಜಿಸಿ ನೀ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿಗಳು:**

**ಪರಗತಿಗೆ ನಿಧಾನ** – ಮೋಕ್ಷಕ್ಕೆ ಆಸರೆ (ನಿರ್ಧಾರ ಎಂದೂ ಪಾಠಾಂತರವಿದೆ).

**ದುರಿತ ಗಜಕ್ಕೆ ಕಂಠೀರವ** – ಪಾಪಗಳೆಂಬ ಆನೆಗೆ ಸಿಂಹದಂತಿರುವ.

**ಕಂದನ** – ತನ್ನ ಮಗನನ್ನು, ನಾರಾಯಣನೆಂಬ ಹೆಸರಿನವನನ್ನು.

**Classification:** Keerthane
**Ankita:** srisha purandara vittala
**Location:** NA
**Category:** nama mahatma
**Sub-Category:** Krishna, smarane, gaja, draupadi, asura, Akshaya, ajamila, bhajane, prahallada, Ananda, sharana,
**Pravachana:** NA
**Explanation:** NA